ಸ್ಪೇನಿನ ಶೇ. 4.75 ಸ್ತ್ರೀಯರು ಮಾತ್ರ ಈ ರಜೆಯ ಪ್ರಯೋಜನ ಪಡೆದುಕೊಂಡಿದ್ದಾರೆ. ಇದಕ್ಕೆ, ವೈದ್ಯರಿಂದ ಗರ್ಭಾಶಯದ ತೊಂದರೆಗಳ ಅಥವಾ ಹಾರ್ಮೋನುಗಳ ತೀವ್ರ ವ್ಯತ್ಯಾಸದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ತರಬೇಕೆನ್ನುವ ಅಡಚಣೆಯೂ ಕಾರಣವಾಗಿರಬಹುದು ಎನ್ನಲಾಗಿದೆ. ಇನ್ನು ಎಷ್ಟೋ ಜನಕ್ಕೆ ಇಂತಹ ಕಾನೂನಿನ ಅರಿವೇ ಇಲ್ಲದಿರುವುದು, ಅದಕ್ಕೆ ಅಗತ್ಯವಾದ ಗಣಕೀಕೃತ ಅಳವಡಿಕೆಗಳು ಇಲ್ಲದಿರುವುದು ಕೂಡ ಕಾನೂನು ಜಾರಿಯಾದ ಮೊದಲ ವರ್ಷದ ತೊಡಕುಗಳಾಗಿವೆ ಎನ್ನಲಾಗಿದೆ.

ಸ್ಪೇನ್ ದೇಶದ ಉದಾಹರಣೆಯನ್ನು ಸಕಾರಾತ್ಮಕವಾಗಿ ನೋಡಿದರೆ ಮುಟ್ಟಿನ ರಜೆಯನ್ನು ಕಾನೂನಾತ್ಮಕವಾಗಿಸಿದ ಕೂಡಲೇ ತೊಂದರೆಯಿರದವರೆಲ್ಲ ಈ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳಲಾರರು ಎಂಬುದು ಸಮಾಧಾನ ತರುವ ಸಂಗತಿಯಾಗಿ ಕಂಡುಬರುತ್ತದೆ. ಹೆಂಗಸರನ್ನು ಕೆಲಸಕ್ಕೆ ತೆಗೆದುಕೊಂಡರೆ, ಅವರಿಗೆ ಪ್ರತಿ ತಿಂಗಳು ರಜೆ ಕೊಡಬೇಕಾಗುತ್ತದೆ ಎಂದು ಹೆದರುವ ಖಾಸಗಿ ಉದ್ಯಮಿಗಳಿಗೆ ಈ ಉದಾಹರಣೆ ಭರವಸೆಯನ್ನೂ ನೀಡಬಹುದು.

ನಕಾರಾತ್ಮಕವಾಗಿ ವಿಶ್ಲೇಷಿಸುವುದಾದರೆ, ಕಾನೂನು ಅಸ್ತಿತ್ವಕ್ಕೆ ಬಂದರೂ, ಇನ್ನಾವುದೋ ಕಾರಣ ಹೇಳಿ ಕೆಲಸದಿಂದ ತೆಗೆಯಬಹುದು ಎಂಬ ಹೆದರಿಕೆಯಿಂದ ಮಹಿಳೆಯರು ಮುಕ್ತವಾಗಿಲ್ಲದಿರುವುದು ಕಂಡುಬರುತ್ತದೆ. ಅಥವಾ ಉದ್ಯಮಿಗಳು ಅಂತಹ ನೀತಿಯನ್ನು ಪರೋಕ್ಷವಾಗಿ ಉಪಯೋಗಿಸುತ್ತಿರಬಹುದು ಎಂಬ ಅನುಮಾನಗಳನ್ನು ಮತ್ತೆ ದೃಢಪಡಿಸುತ್ತದೆ.



## ಮಾಸಿಕ ದಿನಗಳ ವಾಣಿಜ್ಯೀಕರಣ ದಂಧೆಗಳು

ಹಲವು ದೇಶಗಳಲ್ಲಿ ಮುಟ್ಟಿನ ಕುರಿತಾಗಿ ಹಲವು ಕಾನೂನುಗಳಿವೆ. ಅದರಲ್ಲಿ 'ಮೆನ್‌ಸ್ಟ್ರುವಲ್ ಲಾ' ಕೂಡ ಒಂದು. ಈ ಪ್ರಕಾರ ಸ್ಯಾನಿಟರಿ ನ್ಯಾಪ್ಕಿನ್, ಟ್ಯಾಂಪನ್ ಮತ್ತು ಸ್ಯಾನಿಟರಿ ಕಪ್‌ನಂತಹ ಋತುಸ್ರಾವದ ಬಳಕೆಗಾಗಿ ಇರುವ ವಸ್ತುಗಳನ್ನು ಕೆಲವು ಸ್ಥಳಗಳಲ್ಲಿ ಕೆಲವು ಸಮುದಾಯಗಳಿಗೆ ಉಚಿತವಾಗಿ ನೀಡುವ ಆದೇಶವಿದೆ. ಅಂತೆಯೇ ಈ ವಸ್ತುಗಳ ಮೇಲೆ ತೆರಿಗೆಯ ಶುಲ್ಕ ವಿಧಿಸಬಾರದು ಎಂಬ ಕಟ್ಟಳೆಯಿದೆ.

ಬಹಳಷ್ಟು ಅರಿವು ಮೂಡಿಸುವ ಕಾರ್ಯಕ್ರಮಗಳು, ಚಳವಳಿಗಳು ನಡೆದ ನಂತರ 2018ರಲ್ಲಿ ಸ್ಯಾನಿಟರಿ ನ್ಯಾಪ್ಕಿನ್‌ಗಳ ಮೇಲಿದ್ದ ಶೇ. 12ರ ತೆರಿಗೆಯ ಶುಲ್ಕವನ್ನು ಭಾರತ ತೆರವುಗೊಳಿಸಿತು. ಆದರೆ, ಭಾರತದಲ್ಲಿ 'ಮುಟ್ಟಿನ ಕಟ್ಟಲೆ' ಜಾರಿಯಲ್ಲಿಲ್ಲ. ಸ್ಕಾಟ್ಲೆಂಡ್ ದೇಶ ಸ್ಯಾನಿಟರಿ ಪ್ಯಾಡು ಅಥವಾ ಅಗತ್ಯದ ವಸ್ತುಗಳನ್ನು ತಮ್ಮ ದೇಶದ ಮಹಿಳೆಯರಿಗೆ 2022ರಿಂದ ಉಚಿತಗೊಳಿಸಿದೆ. ಆ ಮೂಲಕ ಇಡೀ ಪ್ರಪಂಚದಲ್ಲಿ ಅಂತಹ ಮೊದಲ ದೇಶವೆನಿಸಿಕೊಂಡಿದೆ.

ಭಾರತದಲ್ಲಿ ಮತ್ತು ಪ್ರಪಂಚದ ಹಲವೆಡೆ ಮಹಿಳೆಯರು ಉಪಯೋಗಿಸುವ ಬಹುತೇಕ ಉತ್ಪನ್ನಗಳು ದುಬಾರಿಯಾಗಿವೆ. ಇದನ್ನು 'ಪಿಂಕ್ ಟ್ಯಾಕ್ಸ್' ಎನ್ನುತ್ತಾರೆ. ಕೆಲವೇ ಕೆಲವು ಉದ್ಯಮಿಗಳು ಮಾತ್ರ ಈ 'ಉತ್ಪನ್ನ ಮತ್ತು ಪೂರೈಕೆಗಳ' ವಿಚಾರದಲ್ಲಿ ಏಕಸ್ವಾಮ್ಯತೆಯನ್ನು ಕಾದುಕೊಂಡಿದ್ದಾರೆ ಎನ್ನಲಾಗಿದೆ. ಈ ಕಾರಣಗಳಿಂದಾಗಿ ಒಮ್ಮೆ ಉಪಯೋಗಿಸಿ ಎಸೆಯಬೇಕಾದ, ಮರುಬಳಕೆ ಮಾಡಲಾಗದ ಸ್ಯಾನಿಟರಿ ನ್ಯಾಪ್ಕಿನ್‌ಗಳು ದುಬಾರಿ ಬೆಲೆಯನ್ನೇ ಹೊಂದಿವೆ. ಕೈಗೆಟುಕದ ಕಾರಣದಿಂದಲೇ, ಒಗೆದು ಒಣಗಿಸಿ ಬಳಸುವ ಮುಟ್ಟಿನ ಬಟ್ಟೆಗಳನ್ನು ಇಂದಿಗೂ ಬಹಳಷ್ಟು ಮಹಿಳೆಯರು ಉಪಯೋಗಿಸುತ್ತಿದ್ದಾರೆ. ಆದರೆ, ಈ ಬಟ್ಟೆಗಳ ಬಳಕೆ ಸುಲಭವಲ್ಲ. ರಕ್ತದ ಕಲೆಗಳು ಕಾಣಬಹುದು ಎಂಬ ಭಯ, ಅವನ್ನು ಬದಲಾಯಿಸಿಕೊಳ್ಳಲು ಇಲ್ಲದ ಸೌಲಭ್ಯಗಳು, ಅವುಗಳ ಬಳಕೆ ತರುವ ಇರುಸುಮುರುಸು, ಅವುಗಳ ಘರ್ಷಣೆ ಅಥವಾ ಒತ್ತಡದಿಂದ ಉಂಟಾಗುವ ಗಾಯಗಳು, ಹರಡಬಹುದಾದ ಸೋಂಕುಗಳು, ವಾಸನೆ – ಇದೆಲ್ಲದರಿಂದಾಗಿ ಬಟ್ಟೆಯನ್ನು ಉಪಯೋಗಿಸುವ ವಿದ್ಯಾರ್ಥಿನಿಯರು, ಕಾರ್ಮಿಕರು, ಉದ್ಯೋಗಸ್ಥ ಮಹಿಳೆಯರು ಈ ದಿನಗಳಲ್ಲಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಬಹಳಷ್ಟು ಬಳಲುತ್ತಾರೆ.

ಟ್ಯಾಂಪಾನುಗಳ ಬಳಕೆಯ ಬಗ್ಗೆ ಭಾರತದ ಹಲವೆಡೆ ಮೂಢನಂಬಿಕೆಗಳಿವೆ. ಟ್ಯಾಂಪಾನುಗಳನ್ನು ಬಳಸಿದರೆ ಕನ್ಯಾಪೊರೆಯೇ ಹರಿದು ಹೆಣ್ಣುಮಕ್ಕಳ ಕನ್ಯತ್ವಕ್ಕೆ ಧಕ್ಕೆ ಬರುತ್ತದೆ ಎಂಬ ಹುಸಿನಂಬಿಕೆಗಳಿವೆ. ಹಾಗಾಗಿ ಇವುಗಳ ಮಾರಾಟ ಹೆಚ್ಚು ನಡೆಯುತ್ತಿಲ್ಲ. ಆದರೆ, ಮೆನ್‌ಸ್ಟ್ರುವಲ್ ಕಪ್‌ಗಳ ಬಳಕೆಯ ಬಗ್ಗೆ ವಿರೋಧ ಕಂಡುಬಂದಿಲ್ಲ.

'ಮಾಸಿಕ ಋತುಸ್ರಾವದ ಬಡತನ' ಅಥವಾ 'ಮೆನ್‌ಸ್ಟ್ರುವಲ್ ಪಾವರ್ಟಿ' ಇರುವ ದೇಶಗಳ ಪಟ್ಟಿ ದೊಡ್ಡದಿದೆ. ಈ ಪರಿಸ್ಥಿತಿಯನ್ನು ಹೊಂದಿರುವ ದೇಶ, ರಾಜ್ಯ ಮತ್ತು ವಾಸಸ್ಥಾನಗಳು ಪ್ರಪಂಚದ ಎಲ್ಲೆಡೆ ವ್ಯಾಪಕವಾಗಿವೆ. ಈ ಬಗ್ಗೆ ನಡೆದ ಅಧ್ಯಯನದ ಪ್ರಕಾರ, ಪ್ರತಿ ಹತ್ತು ಹುಡುಗಿಯರಲ್ಲಿ ಒಬ್ಬರು ಮುಟ್ಟಿನ ದಿನಗಳಂದು ಶಾಲೆಯನ್ನು ತಪ್ಪಿಸುತ್ತಾರೆ. ಮುಟ್ಟಿನ ಪರಿಕರಗಳ ಸವಲತ್ತು ಇವರ ಬಳಿ ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ.

ಏನೆಲ್ಲ ಅಂಕಿ–ಅಂಶಗಳಿದ್ದರೂ ಶಿಕ್ಷಣ ಮತ್ತು